ಸಿ.ಸಿ .ನಂ. 165/2022 ಪಿಡಬ್ಲೂಃ 1

ದಿನಾಂಕಃ 22-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್.ಜಿ.ಎನ್. ವಕೀಲರಿಂದಃ**

ನಮ್ಮ ಸಹಕಾರಿಯ ಕಾರ್ಯವ್ಯಾಪ್ತಿ ಅಂಕೋಲಾ ತಾಲ್ಲೂಕಿನಲ್ಲಿ ಇಲ್ಲ ಎಂದರೆ ಸರಿಯಲ್ಲ . ಅಂಕೋಲಾ, ಕಾರವಾರಕ್ಕೆ ನಮ್ಮ ಕಾರ್ಯವ್ಯಾಪ್ತಿ ಇದೆ ಎಂದು ತೋರಿಸಲು ದಾಖಲಾತಿ ಇಲ್ಲ . ಕಾರ್ಯವ್ಯಾಪ್ತಿಯ ಬಗ್ಗೆ ನಮಗೆ ಸಹಕಾರಿ ಇಲಾಖೆಯವರು ಅನುಮತಿಯನ್ನು ನೀಡುತ್ತಾರೆ ಎಂದರೆ ಸರಿ. ಅಂಕೋಲಾ ವ್ಯಾಪ್ತಿ ಇದೆ ಎಂದು ತೋರಿಸಲು ನಮ್ಮ ಸಹಕಾರಿ ಇಲಾಖೆಯಿಂದ ಯಾವುದೇ ಅನುಮತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ಆ ಅನುಮತಿ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಕಾರಣ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ . ಈ ಪ್ರಕರಣದ ಆರೋಪಿ ಹಾಗೂ ಸಾಲಗಾರರು ಅಂಕೋಲಾ ತಾಲ್ಲೂಕಿನ ಮಂಜಗುಣಿ ಗ್ರಾಮದವರು ಎಂದರೆ ಸರಿ.

ಹಿಂದಿನ ಪಾಟೀ ಸವಾಲಿನಲ್ಲಿ ಮಾರ್ಟಗೇಜ್ ಮಾಡಿಕೊಂಡಿದ್ದೇವೆ ಎಂದು ಹೇಳುವ ಸ್ವತ್ತು ಅಂಕೋಲಾ ತಾಲ್ಲೂಕಿನಲ್ಲಿದೆ. ಸಾಲಗಾರರು ಹಾಗೂ ಜಾಮೀನುದಾರರು ಹಾಗೂ ಅಡಮಾನ ಮಾಡಿಕೊಂಡ ಆಸ್ತಿ ಅಂಕೋಲಾ ತಾಲ್ಲೂಕಿನಲ್ಲಿರುವುದರಿಂದ ಸಹಕಾರಿ ಇಲಾಖೆಯಿಂದ ನೀಡಿದಂತಹ ಅನುಮತಿ ಪತ್ರ ಪ್ರಮುಖವಾದ ದಾಖಲಾತಿ ಎಂದರೆ ಸರಿ. ಸಾಲಗಾರರ ವಿರುದ್ಧ ಸಾಲ ವಸೂಲಾತಿ ಕ್ರಮ ತೆಗೆದುಕೊಂಡಿದ್ದೇವೆ. ಅವರಿಗೆ ನೋಟಿಸ್ ನ್ನು ನೀಡಿದ್ದೇವು . ಇದು ಚೆಕ್ ಕೇಸ್ ಆದ್ದರಿಂದ ಅದನ್ನು ಹಾಜರುಪಡಿಸಿಲ್ಲ. ಇದೇ ಆರೋಪಿಯ ವಿರುದ್ಧ ಅಂಕೋಲಾ ನ್ಯಾಯಾಲಯದಲ್ಲಿ ಅಮಲ್ಜಾರಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಈ ನ್ಯಾಯಾಲಯದಿಂದ ಪ್ರಕರಣ ವರ್ಗಾವಣೆಗೊಂಡಿದೆ ಎಂದು ನುಡಿದಿರುತ್ತಾರೆ. ಆ ಅಮಲ್ಜಾರಿ ಪ್ರಕರಣದಲ್ಲಿ ಆರೋಪಿ ಸುಮಾರು ರೂ. 2,80,000/- ಪೇಮೆಂಟ್

ಮಾಡಿದ್ದಾರೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ಅಮಲ್ಜಾರಿ ಪ್ರಕರಣದಲ್ಲಿ ಬಂದಂತಹ ಹಣದ ಬಗ್ಗೆ ಈ ಪ್ರಕರಣದಲ್ಲಿ ಎಲ್ಲೂ ಜವಾಬು ಕೊಟ್ಟದ್ದಿಲ್ಲ . ಎಂದರೆ ಸಾಕ್ಷಿ ಅಮಲ್ಜಾರಿ ಪ್ರಕರಣ ಶಾರದಾ ಶಾಂತಾರಾಮ ನಾಯ್ಕ ರವರ ವಿರುದ್ಧ ಇದೆ . ಈ ಪ್ರಕರಣದ ರಾಜೇಶ ಶಾಂತಾರಾಮ ನಾಯ್ಕರವರ ವಿರುದ್ಧ ಇದೆ ಎಂದು ನುಡಿದಿರುತ್ತಾರೆ. ಶಾರದಾ ಶಾಂತಾರಾಮ ನಾಯ್ಕ ಈ ಪ್ರಕರಣದ ಸಾಲಗಾರರು ಎಂದರೆ ಸರಿ . ರಾಜೇಶ ಶಾಂತಾರಾಮ ನಾಯ್ಕ ರವರ ವಿರುದ್ಧ ಅಮಲ್ಜಾರಿ ಪ್ರಕರಣ ಇದೆ. ರಾಜೇಶ ಶಾಂತಾರಾಮ ನಾಯ್ಕರವರು ವೇತನದಿಂದ ಹಣವನ್ನು ಕಡಿತ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಆದೇಶ ಆಗಿದೆ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ರೂ. 6,841/- ಕಡಿತಕ್ಕೆ ಆದೇಶವಾಗಿದೆ. ರಾಜೇಶ ಶಾಂತಾರಾಮ ನಾಯ್ಕರವರ ವೇತನದಿಂದ ಕಡಿತಗೊಂಡ ಮೊತ್ತ ಹಾಗೂ ಅವರು ಕಟ್ಟಿರುವಂತಹ ಮೊತ್ತ ಸೇರಿ 2,80,000/- ಆಗಿದೆ ಎಂದರೆ ದಾಖಲಾತಿ ನೋಡಿ ಹೇಳಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ. ನಾವು ಹಾಜರುಪಡಿಸಿದ ನಿಪಿ.2 ರಲ್ಲಿ ನಮೂದಿಸಿದ ಚೆಕ್ ನ ಮೊತ್ತ 2,65,000/- ಅಂಕೋಲಾದ ನ್ಯಾಯಾಲಯದಲ್ಲಿ ಅಮಲ್ಜಾರಿ ಪ್ರಕರಣದಲ್ಲಿ ಬಂದಾಗಿದೆ ಎಂದರೆ ಸಾಕ್ಷಿ ಈ ಪ್ರಕರಣಕ್ಕೆ ಅದು ಸಂಬಂಧ ಇಲ್ಲ ಎಂದು ನುಡಿದಿರುತ್ತಾರೆ . ಅಮಲ್ಜಾರಿ ಪ್ರಕರಣದಲ್ಲಿ ಹಾಜರುಪಡಿಸಿದ ಖಾತಾ ಉತಾರ ನಂ. ಹಾಗೂ ಈ ಪ್ರಕರಣದಲ್ಲಿರುವ ಖಾತಾ ಉತಾರ ನಂ. ಒಂದೇ ಇದೆ ಎಂದರೆ ಸರಿ . ಅಮಲ್ಜಾರಿ ಪ್ರಕರಣದಲ್ಲಿ ರಾಜೇಶ ಶಾಂತಾರಾಮ ನಾಯ್ಕ ಹಾಗೂ ಶಾರದಾ ಶಾಂತಾರಾಮ ನಾಯ್ಕ ಇದೇ ಸಾಲದ ಖಾತೆಗೆ ಸಾಲಗಾರರು ಹಾಗೂ ಜಾಮೀನುದಾರರು ಎಂದರೆ ಸರಿ . ರಾಜೇಶ ಶಾಂತಾರಾಮ ನಾಯ್ಕ ಅದೇ ಸಾಲದ ಖಾತೆಗೆ ಈ ಚೆಕ್ ನ್ನು ನೀಡಿದ್ದರು ಎಂದರೆ ಸಾಕ್ಷಿ ನೀಡಿರಬಹುದು ಆದರೆ ಚೆಕ್ ಕೇಸ್ ಮೊದಲು ಹಾಕಿದ್ದೇವೆ ಅಮಲ್ಜಾರಿ ಪ್ರರಕಣ ನಂತರದಲ್ಲಿ ಹಾಕಿರುವುದು ಎಂದು ನುಡಿದಿರುತ್ತಾರೆ. ಚೆಕ್ ಕೇಸ್ ಹಾಕಿದ ನಂತರ ಅಮಲ್ಜಾರಿ ಪ್ರಕರಣದಲ್ಲಿ ನಮಗೆ ಹಣ ವಸೂಲತಿ ಆಗಿದೆ ಎಂದರೆ ಸರಿ. ಆದರೆಚೆಕ್ ಕೇಸ್ ನಲ್ಲಿ ಹಣ ವಸೂಲಿ ಆಗಿಲ್ಲ. ಅಮಲ್ಜಾರಿ ಪ್ರಕರಣದ

ಖಾತೆ ಹಾಗೂ ಚೆಕ್ ಖಾತೆ ಎರಡು ಅಕೌಂಟ ಒಂದೇ . ಈ ಪ್ರಕರಣದ ಚೆಕ್ ಮೊತ್ತ ನಮಗೆ ಈಗಾಲೇ ಸಂದಾಯವಾಗಿರುವುದರಿಂದ ಈ ಪ್ರಕರಣವನ್ನು ಮುಂದುವರಿಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಈ ದಿನದವರೆಗಿನ ಸಾಲದ ಖಾತಾ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಆರೋಪಿ ಪರ ವಕೀಲರಿಗೆ ಹಾಜರುಪಡಿಸುತ್ತೇನೆ ಎಂದು ಹೇಳಿದ್ದರು . ಆದರೆ ಈದಿನ ನಾನು ಸದರಿ ದಾಖಲಾತಿಯನ್ನು ತೆಗೆದುಕೊಂಡು ಬಂದಿದ್ದೇನೆ ಎಂದು ನುಡಿದಿರುತ್ತಾರೆ . ಸಾಕ್ಷಿ ಈದಿನ ಮೆಮೋದೊಂದಿಗೆ ಸಾಲದ ಖಾತಾ ಉತಾರ, ಸಾಲದ ಅರ್ಜಿ, ಪ್ರಾಮಿಸರಿ ನೋಟ್ ನ ಧೃಡೀಕೃತ ನಕಲು ಮತ್ತು ಸಾಲದ ಕರಾರನ್ನು ಹಾಜರುಪಡಿಸಿರುತ್ತಾರೆ.

ನಾವು ಹಾಜರುಪಡಿಸಿದ ಖಾಸಾ ಉತಾರ ಪ್ರಕಾರ ಆರೋಪಿ ದಿಃ 13-02-2024 ರಿಂದ 18-12-2025 ರವರೆಗೆ ರೂ. 1,91,000/- ಗಳನ್ನು ಸಾಲಗಾರರ ಖಾತೆಗೆ ಜಮಾ ಆಗಿದೆ ಎಂದರೆ ಸರಿ . ಸಾಲಗಾರರ ಸಾಲ ವಸೂಲಾತಿ ಆಗಬೇಕು ಎಂದು ಆರೋಪಿ ಚೆಕ್ ನ್ನು ನೀಡಿದ್ದಾರೆ ಎಂದರೆ ಸಾಕ್ಷಿ ಭಾಗಶಃ ಸಾಲ ವಸೂಲಾತಿಗೆ ನೀಡಿದ್ದಾರೆ ಎಂದು ನುಡಿದಿರುತ್ತಾರೆ . ನಾವು ದಾಖಲಿಸಿದ ಈ ಪ್ರಸ್ತುತ ಪ್ರಕರಣದಲ್ಲಿ ಅಮಾನ್ಯಗೊಂಡ ಚೆಕ್ 2,65,000/- ಗಳದ್ದಾಗಿದೆ ಎಂದರೆ ಸರಿ. ಈ ಪ್ರಕರಣದ ಸಾಲದ ಖಾತೆಯ ಹಣ ಅಮಲ್ಜಾರಿ ಪ್ರಕರಣದಲ್ಲಿ 1,91,000/- ಜಮಾ ಆಗಿದೆ ಎಂದರೆ ಸರಿ. ಚೆಕ್ ಅಮಾನ್ಯ ಪ್ರಕರಣದಲ್ಲಿ ರೂ. 1,91,000/- ಜಮಾ ಆಗಿದೆ ಎಂದರೆ ಸರಿಯಲ್ಲ . ಚೆಕ್ ಪ್ರಕರಣದಲ್ಲಿ ನಮಗೆ ಸಂದಾಯವಾದ ಹಣವನ್ನು ಮರೆಮಾಚಿ ಪ್ರಕರಣವನ್ನು ಮುಂದುವರೆಸುತ್ತಿದ್ದೇವೆ ಎಂದರೆ ಸರಿಯಲ್ಲ.

ಮಾರ್ಟಗೇಜ್ ಮಾಡಿದ ಆಸ್ತಿಯ ಸರ್ವೇ ನಂ. ನೆನಪಿಲ್ಲ. ಒಟ್ಟೂ 3 ಆಸ್ತಿಗಳನ್ನು ಮಾರ್ಟಗೇಜ್ ಮಾಡಿದ್ದಾರೆ. ಬೋರ್ಡಗೂ ಹೋದಾಗ ಒಂದು ಆಸ್ತಿ ಸಾಕಾಗುವುದಿಲ್ಲ ಎಂದು ಹೇಳಿದ್ದರಿಂದ ಎರಡು ಆಸ್ತಿಗಳನ್ನು ಎಡಿಶನಲ್ ಆಗಿ ತೆಗೆದುಕೊಳ್ಳಲಾಗಿದೆ. Recommendation of Board ನಲ್ಲಿ ಎಲ್ಲೂ ಒಂದು ಆಸ್ತಿ ಸಾಕಾಗುವುದಿಲ್ಲ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಮೌ ಖಿಕವಾಗಿ ಹೇಳಿರುತ್ತಾರೆ ಎಂದು

ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಚೆಕ್ ಮೊತ್ತ ಸಂದಾಯವಾಗಿದ್ದರೂ ಕೂಡ ಆರೋಪಿಯ ಮೇಲೆ ಇರುವ ದ್ವೇಷದಿಂದ ಪ್ರಕರಣವನ್ನು ಮುಂದುವರೆಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ದಾಖಲಾತಿ ಪ್ರಕಾರ ಆರೋಪಿ 1,91,000/- ರೂ. ಕಟ್ಟಿರುವುದರಿಂದ ಆರೋಪಿ ಪ್ರಕರಣದಿದಿಂದ ಖುಲಾಸೆಯಾಗಲು ಅರ್ಹರಿದ್ದಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.